ಶ್ರೀ ವೈ.ಎಸ್.ವಿ. ದತ್ತಾ:– Implicit guarantee ಬೇಗ ದೆಹಲಿಯಲ್ಲಿ ಅಪ್ರೂವ್ ಆಗುವ ಹಾಗೆ follow up ಮಾಡಲಿಕ್ಕೆ ಒಬ್ಬರನ್ನು depute ಮಾಡಿ.

ಶ್ರೀ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು):– ಈಗ ತಾವೇನು ಹೇಳಿದಿರಿ ಆ ಎಲ್ಲಾ efforts ಅನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಸಿ.ಟಿ. ರವಿ:– Ad hoc ಆಗಿ release ಮಾಡಿ. ಆಮೇಲೆ bank guarantee case ಮುಂದುವರೆಸಲಿ. ಇಲ್ಲದೆ ಹೋದರೆ ಅವರು ಸತ್ತುಹೋಗುತ್ತಾರೆ.

ಅಧ್ಯಕ್ಷರು:– ಆಯಿತು.

6. ವಿಷಯ: ಕೆ–ಶಿಪ್ ಯೋಜನೆಯಡಿ ಬೀರೂರಿನಿಂದ ದಾವಣಗೆರೆಯವರೆಗಿನ ರಸ್ತೆಯ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಇದುವರೆವಿಗೂ ಕಾಮಗಾರಿ ಪ್ರಾರಂಭವಾಗದೆ ತೊಂದರೆಯುಂಟಾಗಿರುವ ಬಗ್ಗೆ.

ಶ್ರೀ ಜಿ.ಹೆಚ್. ಶ್ರೀನಿವಾಸ್ (ತರೀಕೆರೆ):– ಕೆ–ಶಿಪ್ ಯೋಜನೆಯಡಿ ಬೀರೂರಿನಿಂದ ದಾವಣಗೆರೆಯವರೆಗಿನ ರಸ್ತೆಯ ಕಾಮಗಾರಿಗೆ ಟೆಂಡರ್ ಕರೆಯಲಾಗಿದ್ದು, ಇದುವರೆವಿಗೂ ಕಾಮಗಾರಿ ಪ್ರಾರಂಭವಾಗಿಲ್ಲ. ಈಗಾಗಲೇ 2.00 ಕೋಟಿ ರೂಪಾಯಿಗಳ ಕೆಲಸವನ್ನು ನಾವು 115 ಕಿ.ಮೀ. ಗೆ ರಿಪೇರಿ ಮಾಡಲಿಕ್ಕೆ ಹೇಳಿದ್ದಾರೆ. ಅದು ಯಾವುದಕ್ಕೂ ಸಾಕಾಗುತ್ತಿಲ್ಲ. ಅವರು 5.00 ಕೋಟಿ ರೂಪಾಯಿಗಳಿಗೆ ಮಾತ್ರ sanction ಮಾಡಿ ಎಂದು ಮಿನಿಮಮ್ ಎಸ್ಟಿಮೇಟ್ ಕಳುಹಿಸಿದ್ದಾರೆ. ದಯಮಾಡಿ ರಿಪೇರಿ ಮಾಡಲಿಕ್ಕೆ 5.00 ಕೋಟಿ ರೂಪಾಯಿಗಳನ್ನು sanction ಮಾಡಬೇಕೆಂದು ಹೇಳಿ ಸಚಿವರ ಗಮನ ಸೆಳೆಯಲಿಕ್ಕೆ ಇಚ್ಛಿಸುತ್ತೇನೆ.

ಅಧ್ಯಕ್ಷರು:– ಸಚಿವರು ಇದಕ್ಕೆ ಆಗಲೇ ಹೇಳಿದ್ದಾರೆ. ಅದೇ ವಿಷಯವಿರಬೇಕು.

ಶ್ರೀ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು):– ಸರ್, ಆಗಲೇ ಈ ವಿಷಯಕ್ಕೆ ಸಂಬಂಧಪಟ್ಟಂತೆ ಉತ್ತರ ಹೇಳಿದ್ದೇನೆ.

ಅಧ್ಯಕ್ಷರು:– ಈ ವಿಷಯಕ್ಕೆ ಸಚಿವರು ಆಗಲೇ ಸುದೀರ್ಘವಾಗಿ ಉತ್ತರ ಹೇಳಿದ್ದಾರೆ.

ಶ್ರೀ ಜಿ.ಹೆಚ್. ಶ್ರೀನಿವಾಸ್:– ಆಗಲೇ ಸಚಿವರು ಎಲ್ಲಾ ಹೇಳಿದ್ದಾರೆ, ಸಮಾಧಾನವಾಗಿದೆ. ಟೆಂಡರ್ ಅನ್ನು ಯಾವಾಗ ಕರೆಯುತ್ತಾರೆಂದು ಹೇಳಬೇಕು.

ಅಧ್ಯಕ್ಷರು:– ಹೇಳಿದ್ದಾರೆ.

ಶ್ರೀ ಜಿ.ಹೆಚ್. ಶ್ರೀನಿವಾಸ್:– ಟೆಂಡರ್ ಕರೆಯುತ್ತೇವೆಂದು ಹೇಳಿದ್ದಾರೆ.

ಶ್ರೀ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು):– ನಾನು ದಿನಾಂಕ ಸಹಿತವಾಗಿ ಹೇಳಿದ್ದೇನೆ. ಅಗತ್ಯಬಿದ್ದರೆ ನಮ್ಮ ಕೆ–ಶಿಪ್ ಎಂ.ಡಿ.ಯವರನ್ನು ಜೊತೆಗೆ ಕಳುಹಿಸಿ ನಮ್ಮ ಸ್ಥಳೀಯ ಶಾಸಕರನ್ನು ಜೊತೆಗೆ ಕರೆದುಕೊಂಡು ಅಲ್ಲಿ ಕೊಟ್ಟಿರುವ ಹಣ ಸಾಕಾಗದಿದ್ದರೆ ಅದನ್ನು maintain ಮಾಡಲಿಕ್ಕೆ ಏನು ಅಗತ್ಯವಿದೆ ಅದನ್ನೂ ಕೂಡ ಮಾಡುತ್ತೇವೆಂದು ಅವರಿಗೂ ಕೂಡ ನಾನು ಹೇಳಿದ್ದೇನೆ.

ಅಧ್ಯಕ್ಷರು:– ದೀರ್ಘವಾಗಿ ಹೇಳಿದ್ದಾರೆ.

ಶ್ರೀ ಹೆಚ್.ಸಿ. ಮಹದೇವಪ್ಪ (ಮಾನ್ಯ ಲೋಕೋಪಯೋಗಿ ಸಚಿವರು):– ನಾಲ್ಕು ದಿವಸಗಳ ಹಿಂದೆಯೇ Gammon India contractor ಅನ್ನು ವಜಾ ಮಾಡಿದ್ದಾರೆ. We will go for re-tender. 33 ತಿಂಗಳುಗಳನ್ನು 21 ತಿಂಗಳುಗಳಲ್ಲಿ ಮಾಡಲಿಕ್ಕೆ ಎರಡು ಫೇಸ್‌ನಲ್ಲಿ ಮಾಡಲಿಕ್ಕೆ ನಾವು ಕ್ರಮ ಕೈಗೊಳ್ಳುತ್ತಿದ್ದೇವೆ.

ಅಧ್ಯಕ್ಷರು:– ಆಯಿತು. ರೇವಣ್ಣನವರು…

ಶ್ರೀ ಹೆಚ್.ಡಿ. ರೇವಣ್ಣ:– ಉತ್ತರವನ್ನು ಕೊಟ್ಟಿಲ್ಲ.

ಅಧ್ಯಕ್ಷರು:– ಕಾಲಾವಕಾಶ ಕೇಳಿದ್ದಾರೆ.

ಶ್ರೀ ಹೆಚ್.ಡಿ. ರೇವಣ್ಣ:– ಏಳು ವರ್ಷಗಳಿಂದ ಕಾಲಾವಕಾಶ ಬೇಕೇ, ಸರ್?

ಅಧ್ಯಕ್ಷರು:– ಆಗುತ್ತದೆ, ಏನು ಮಾಡಲಿಕ್ಕಾಗುತ್ತದೆ ಹೇಳಿ.

ಶ್ರೀ ಹೆಚ್.ಡಿ. ರೇವಣ್ಣ:– ತಾವು ಇದ್ದೂ ಹೀಗಾದರೆ ಹೇಗೆ, ಸರ್?

ಅಧ್ಯಕ್ಷರು:– ಆಯಿತು ಬಿಡಿ, ಕೊಡಿಸೋಣ. ಶಿವಲಿಂಗೇಗೌಡರು ಹೇಳಿ.

7. **ವಿಷಯ: ಹಾಸನ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಸ್ಥೆಯ ಆಡಳಿತ ಮಂಡಳಿಗೆ ಚುನಾವಣೆ ನಡೆಸಲು ಒಂದು ವರ್ಷಕ್ಕಿಂತಲೂ ಕಡಿಮೆ ಅವಧಿ ಇರುವ ಸಂದರ್ಭದಲ್ಲಿ ಸಂಸ್ಥೆಯ ಸದಸ್ಯತ್ವದ ಷೇರು ಮೊತ್ತವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿರುವ ಬಗ್ಗೆ.**

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ):– ಹಾಸನ ಜಿಲ್ಲಾ ಕೇಂದ್ರ ಸಹಕಾರ ಸಗಟು ಮಾರಾಟ ಸಂಸ್ಥೆಯ ಆಡಳಿತ ಮಂಡಳಿಗೆ ಚುನಾವಣೆ ನಡೆಸಲು ಒಂದು ವರ್ಷಕ್ಕಿಂತಲೂ ಕಡಿಮೆ ಅವಧಿ ಇರುವ ಸಂದರ್ಭದಲ್ಲಿ ಸಂಸ್ಥೆಯ ಸದಸ್ಯತ್ವದ ಷೇರು ಮೊತ್ತವನ್ನು ಹೆಚ್ಚಿಸಲು ಪ್ರಯತ್ನಿಸುತ್ತಿರುವ ಬಗ್ಗೆ ಮಾನ್ಯ ಸಹಕಾರ ಸಚಿವರ ಗಮನ ಸೆಳೆಯುತ್ತೇನೆ.

ಅಧ್ಯಕ್ಷರು:– ಉತ್ತರ ಹೇಳಿ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಮತ್ತು ಸಹಕಾರ ಸಚಿವರು):– ಹಾಸನ ಜಿಲ್ಲಾ ಕೇಂದ್ರ ಸರ್ಕಾರ ಸಗಟು ಮಾರಾಟ ಸಂಸ್ಥೆ, ನಿಯಮಿತ, ಹಾಸನ ಇದರ ಪ್ರಯುಕ್ತ ಇರುವ ಚುನಾವಣೆ 22.3.2010 ರಂದು ಜರುಗಿದ್ದು ಇವರ ಅವಧಿಯು ಚುನಾವಣೆ ನಡೆದ ದಿನಾಂಕದಿಂದ 5 ವರ್ಷದೊಳಗೆ ಕೊನೆಗೊಳ್ಳಲಿದೆ. ಸಂಘದ ಉಪ